ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸದರಿ ಪ್ರದೇಶಗಳಲ್ಲಿ ಮೋರಿಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ ಹಾಗೂ ಸೊಳ್ಳೆ ನಿವಾರಕ ಔಷಧಿಗಳನ್ನು ಸಿಂಪಡಿಸಲಾಗುತ್ತಿದೆ.

ಆ) ಈ ಬಗ್ಗೆ ನಿರ್ದಿಷ್ಟವಾದ ದೂರುಗಳು ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅಬಕಾರಿ ನಿಯಮಾವಳಿ ಕುರಿತು

239 - ಶ್ರೀ ಕುಮುರಲ್ ಇಸ್ಲಾಂ (ಗುಲ್ಬರ್ಗಾ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) *ಈಗ ಚಾಲ್ತಿಯಲ್ಲಿರುವ ಅಬಕಾರಿ ನಿಯಮಗಳ ಪ್ರಕಾರ ಯಾವುದೇ ಒಂದು ಮದ್ಯದ ಅಂಗಡಿಯನ್ನು ಪೂಜಾ ಸ್ಥಳಗಳಿಂದ 200 ಗಜ ವ್ಯಾಪ್ತಿಯಿಂದ ಹೊರಗಿರಬೇಕು ಎಂಬ ನಿರ್ಬಂಧವನ್ನು ಮಾನ್ಯ ಅಬಕಾರಿ ಸಚಿವರು ತೆಗೆಯುವುದಾಗಿ ಹೇಳಿಕೆ ನೀಡಿದ್ದಾರೆಯೇ?*

ಬಿ) *ಹಾಗಿದ್ದಲ್ಲಿ ಈ ರೀತಿಯ ಕ್ರಮ ಪೂಜಾ ಸ್ಥಳಗಳ, ಧಾರ್ಮಿಕ ಪಾವಿತ್ರಕ್ಕೆ ಹಾಗೂ ಸಾರ್ವಜನಿಕರ ಮನೋಭಾವನೆಗೆ ಹಾನಿ ಉಂಟು ಮಾಡುವುದಿಲ್ಲವೆ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಎ) ಇಲ್ಲ.

ಬಿ) (ಎ)ಗೆ ನೀಡಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಕರ್ನಾಟಕ ಹೈ ಕೋರ್ಟ್ ಪೀಠದ ಸ್ಥಾಪನೆ

244 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಹುಬ್ಬಳ್ಳಿ- ಧಾರವಾಡ ನಗರದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮವೇನು, ಹಾಗೂ ಈ ವಿಷಯ ಯಾವ ಹಂತದಲ್ಲಿದೆ;*

2) *ಅದನ್ನು ಎಂದು ಸ್ಥಾಪಿಸಲಾಗುವುದು*

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

1) ಕರ್ನಾಟಕ ಉಚ್ಚ ನ್ಯಾಯಾಲಯದ ಪೀಠವನ್ನು ಹುಬ್ಬಳ್ಳಿ- ಧಾರವಾಡ ನಗರದಲ್ಲಿ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರವು ಸಲಹೆ ಮಾಡಿರುವಂತೆ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಅಭಿಪ್ರಾಯವನ್ನು ಕೋರಲಾಗಿ, ಅದು ಇತ್ತೀಚೆಗೆ ಸ್ವೀಕರಿಸಲಾಗಿದ್ದು ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

2) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಇಂತಿಷ್ಟೇ ಸಮಯದಲ್ಲಿ ಪೀಠವನ್ನು ಸ್ಥಾಪಿಸಲಾಗುವುದೆಂದು ತಿಳಿಸಲು ಸಾಧ್ಯವಿಲ್ಲ.

ಬೆಂಗಳೂರು ಕೇಂದ್ರ ಕಾರಾಗೃಹದ ಬಗ್ಗೆ

246 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೇರಾದ್) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗಾಗಿ ಧಾನ್ಯ ಶಿಬಿರವನ್ನು ಏರ್ಪಡಿಸಿರುವುದು ನಿಜವೇ?

ಇ) ಇದೇ ಮಾದರಿಯ ಶಿಬಿರಗಳನ್ನು ಜಿಲ್ಲಾ ಕಾರಾಗೃಹಗಳಲ್ಲಿಯೂ ಸಹ ಏರ್ಪಡಿಸಲಾಗುವುದೇ

ಶ್ರೀ ಎನ್. ಮೀರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಹೌದು.

ಆ) 1) ಖೈದಿಗಳ ಮನಸ್ಸನ್ನು ಪರಿವರ್ತಿಸಿ ಅವರು ಸಂತೋಷದ ಹಾಗೂ ಸಹಬಾಳ್ವೆಯ ಜೀವನ ನಡೆಸುವಂತೆ ಪ್ರೋತ್ಸಾಹಿಸುವುದು.

2) ಈ ಶಿಬಿರ ನಡೆಸಲು ಹಣ ಖರ್ಚಾಗುವುದಿಲ್ಲ.

ಇ) ಪರಿಶೀಲನೆಯಲ್ಲಿದೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ವಿತ್ತೀಯ ಕಾರ್ಯಕಲಾಪ ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆಯನ್ನು ಆರಂಭ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಪದೇ ಪದೇ ಇಲ್ಲಿ ಎಲ್ಲರಿಗೂ ಹೇಳಬೇಕು ಎಂದು ಹೇಳುತ್ತಲೇ ಬಂದಿದ್ದೇವೆ. ಈಗ ಎಲ್ಲರೂ 9-30ಕ್ಕೆ ಬರಬೇಕು ಎಂದು ಸಮಯವನ್ನು ನಿಗದಿ ಮಾಡಿ ಆ ಪ್ರಕಾರ ಬರುತ್ತಿದ್ದೇವೆ.

ಆ ಕಡೆ ಅರ್ಥ ಸಚಿವರು ಬರಬೇಕು. ಕನಿಷ್ಟ ಸೆಕ್ರೆಟರಿಗಳಾದರೂ ಬರಬೇಕು, ಫೈನಾನ್ಸ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಅಡಿಷನಲ್ ಸೆಕ್ರೆಟರಿ, ಏಕೆಂದರೆ ಸದಸ್ಯರು ಅನೇಕ ಸಲಹೆಗಳನ್ನು ಕೊಡುತ್ತಾರೆ. ನನಗೆ ಏನು ಸೆಕ್ರೆಟರಿಸ್ ಗೊತ್ತಿಲ್ಲವೆ, ನಾನು 25 ವರ್ಷಗಳಿಂದ ಇದ್ದೇನೆ. ಇವತ್ತು ಚೀಫ್ ಸೆಕ್ರೆಟರಿ ಆಗಿರುವವರನ್ನು ಅವರು ಪ್ರೊಬೆಷನರಿಯಿದ್ದಾಗಿನಿಂದಲೇ ನಾನು ನೋಡಿದ್ದೇನೆ. ಅದಕ್ಕೆ ನೀವು ಏನಾದರೂ ಒಂದು ಕಟ್ಟುನಿಟ್ಟಾದಂತಹ ಆದೇಶ ನೀಡಬೇಕು. ಇಲ್ಲವಾದರೆ ಏನಾಗುತ್ತದೆ, ಈ ಸದನವನ್ನು ಎಲ್ಲರೂ ಲಘುವಾಗಿ ತೆಗೆದುಕೊಳ್ಳುತ್ತಾರೆ. ನಾವಾದರೂ ಸಹ ಇಷ್ಟು ಬೇಗ ಏಕೆ ಬರಬೇಕು? ನಾವು ಸಹ ಸಾವಕಾಶವಾಗಿ ಬರುತ್ತೇವೆ. ಯಾರೇ ಮಾತನಾಡಲಿ ನಿಮ್ಮನಮ್ಮ ಸಮಯಕ್ಕೆ